ಯುಗಾದಿ ವಿಶೇಷ ಸಂಚಿಕೆ = 6 ಪೈಸೆಗಳು

R No KRNN - 14 | ಜೈ ಗೋಮಾತಾ Jai Gomata | ಮಾರ್ಚ್ 1974 March

ಗೋರಕ್ಷಣ, ಅಹಿಂಸಾ ಪ್ರಚಾರ ಪತ್ರಿಕೆ
ಇದಕ್ಕೆ ಲೇಖನ ಧನನೆರವು ನೀಡುವವರಿಗೆ ಪ್ರಚಾರಕರಿಗೆ ವಂದನೆಗಳು
ಅನೇಕ ಪ್ರತಿಗಳು ಉಚಿತವಾಗಿ ಹಂಚಲಾಗುತ್ತಿದೆ
ಸಾರ್ವಕಾಲಿಕ ಅಂಚೆಮೂಲ್ಯ 80ಪೈಸೆ
ಸಂಸ್ಥೆಗಳಿಗೆ ರೂ. 1
ಪೇಶಾಪ್ಯಂತ ಗೋವಧೆ ಕೂಡಲೆ ನಿಲ್ಲಲಿ

ಗೋರಕ್ಷಣ
GORAKSHANA

Office– 1067 Chamarajapura Mysore 4

ot even to win Swaraj w I renounce my principle of cow-protection. – Gandhiji

The meat of a cow is disease (marz), its milk is health (safa) its ghee is medicine (dava).
– Al-Ghazalli

Plea e help in every way This Hu anitarian PropagandaPaper Many Papers Distributed Free

ವರ್ಷ 24 th Year | ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ | ಬಿಡಿ ಪ್ರತಿ 5 ಪೈಸೆ

Cow Slaughter should be banned Immediately

ನಿಮಗಾಯುಗಾದಿಶುಭಾಶಯಗಳು

Kannada version of the Article– " Were cow-slaughter, meat-sacrifice and meat-eating prevalent in Vedic times ?

From "A Review of Beef in Ancient India "
Compiled by Syt J. Dalmiaji

ಗೋಹತ್ಯೆ, ಪ್ರಾಣಿಬಲಿ ಮತ್ತು ಮಾಂಸಾಹಾರ ವೇದಕಾಲದಲ್ಲಿ ರೂಢಿಯಲ್ಲಿತ್ತೆ ?

★

[ಮುಂದುವರಿದುದು]

ಮಾಂಸ ಭಕ್ಷಣೆಗೆ ಶಿಕ್ಷೆ

ಮಾಂಸ ಭಕ್ಷಕರು ಯಾತುಧಾನ (ರಾಕ್ಷಸೀ ಮನೋಭಾವಜ ಕ್ರೂರಜನರು) ಎಂದು ವೇದದಲ್ಲಿ ಕರೆಯಲ್ಪಟ್ಟಿದೆ ಮತ್ತು ಅವರಿಗೆ ಶಿಕ್ಷೆ ವಿಧಿಸಲ್ಪಟ್ಟಿದೆ.

ಯಃ ಪೌರುಷೇಯೇಣ ಕ್ರವಿಷಾ ಸಮಂಕ್ತೇ ಯೋ ಅಶ್ವ್ಯೇನ ಪಶುನಾ ಯಾತುಧಾನಃ
ಯೋ ಅಘ್ನ್ಯಾಯಾ ಭರತಿ ಕ್ಷೀರಮಗ್ನೇ ತೇಷಾಂ ಶೀರ್ಷಾಣಿ ಹರಸಾಪಿ ವೃಶ್ಚ (ಋ. 10-87-16)

ನರಮಾಂಸ, ಕುದುರೆ ಅಥವಾ ಮತ್ತಾವ ಪ್ರಾಣಿಯ ಮಾಂಸ ಸೇವಿಸುವ, ಮತ್ತು ಪಶುಹತ್ಯೆಮಾಡಿ ಇತರರಿಗೆ ಹಾಲು ತಪ್ಪಿಸುವೆಂಥಾ ಮನುಷ್ಯಪಿಶಾಚಿಗಳು ಬೇರೆ ಮಾರ್ಗಗಳಿಂದ ಇದನ್ನು ತ್ಯಜಿಸದಿದ್ದರೆ, ಓ ರಾಜ, ನಿನ್ನ ಅಧಿಕಾರದಿಂದ ಕಡಿಗೆ ಅವನ ತಲೆಯನ್ನು ಕತ್ತರಿಸಿಬಿಡು; ಇದೇ ಅವನಿಗೆ ವಿಧಿಸಬಹುದಾದ ಕಟ್ಟಕಡೆ ಶಿಕ್ಷೆ.

ಯ ಆಮಂ ಮಾಸಮದಂತಿ ಪೌರುಷೇಯಂ ಚ ಯೇ ಕವಿಃ
ಗರ್ಭಾನ್ ಖಾದಂತಿ ಕೇಶವಾಸ್ತ್ವನಿತೋ ನಾಶಯಾಮಸಿ [ಅಥರ್ವ 8-6-23

ಈ ಮಂತ್ರದಲ್ಲಿ (ಅಥರ್ವ 8 6-23) ಬೇಯಿಸದ ಮಾಂಸ ತಿನ್ನುವವರು, ಮಾನವರಿಂದ ಬೇಯಿಸಿದ ಮಾಂಸ ತಿನ್ನುವವರು, ಭ್ರೂಣವಾದ ಮೊಟ್ಟೆ ತಿನ್ನುವವರು, ಇವರ ದುಶ್ಚಟವೊಡನೆ ನಾಶಮಾಡು.

ಇದರಿಂದ ವೇದಗಳಲ್ಲಿ ಮಾಂಸ ಸೇವನೆ ನಿಷೇಧಿಸಲ್ಪಟ್ಟಿದೆ ಎಂಬುದು ಸ್ಪಷ್ಟವಾಗಿ ದೃಢಪಡುವುದು.

ಮಹಾಭಾರತದಲ್ಲಿ ಸಾಕ್ಷ್ಯ

ಸಾಗಾಯಿ, ವಿಷಾದ ಮೇಕೆ, ಮಾಂಸ, ಮದ್ಯಸಾರ, ಎಳ್ಳು ಹೊರತು ಬೇಯಿಸಿದ ಅನ್ನ, ಇವುಗಳನ್ನು ದುರ್ವೈಶದ ಜನರು ಸೇರಿಸಿದ್ದಾರೆ. ಯಜ್ಞದಲ್ಲಿ ಇವುಗಳ ಉಪಯೋಗವನ್ನು ವೇದಗಳಲ್ಲಿ ವಿಧಿಸಿಲ್ಲ. [ಮಹಾಭಾರತ, ಶಾಂತಿಪರ್ವ 265 9 257 9]

[ಮುಂದುವರಿಯುವುದು]

The Growth of Vegetarianism

(Continued from last Issue)

an-krit Stanza

The food which brings about diseas , pain and bereaveme t is the food of Raj shik persons which is bitter sour very h ot. pungent, drying and burning

Sanskrit Stanza

To a Tamoshik person t h e low st in th rung of humanity and who equates with brutes, that food is greenble which stale has drie t up, is putrid, remnent of eaten food and i impure and unholy, s ch as fish meat. eggs and wine

Like the worm which thrives in and on increament, the mod–ern civilized man thrives on a on Tam shik ahaar at the best Rajoshik and in a Tamoshik atmostsphere– that is lecherous sensuality And the pernicious precep or of modern civilisation infidel and purblind science advoc tes eating of these tamo–shik food– fis , meat and eggs which stimulate the sensuality and thus immensely harm t h e human system and that is why the Sastras. God's Spoken Word have prohibite t taking of fis , meat and egg in no measured terms

Manu even detests eating of sacrificial e t

Sanskrit Stanza

Realising the origin of meat from the generative energy of blood, the taking of it is detest–able and it is savage to find and and kill an mals for it. There-fore all good people desist from eating even sacrificed meat what to speak of unsacrificed In spite of all religious sanctions for meat eating those who de-sist from meat eating which is fiedish, become dear univ rsally and never afflicted with diseases

Sanskrit stanza

If the Dwijas desist f r o m meat eating, they acquire such a superior Dharm as they can-not acquire even when they live on most pure food such as wild rice (that are taken by t h e Munis) etc

Aga n Manu says–

Sanskrit stanza

One cannot always find faul with the desire for meat eating, drinking and sexual intercourse as this is inherent in e v e r y hnman being; but to desist from the same is a gre t virtue.

Even fish is prohibited

Sanskrit stanza

Any one eating the flesh of any creature is called flesh eater of that particular creature And as fish devours the flesh of all creatures, it is said t o b e omn carnivorous. Therefore he who eats fish acquires the great sin of eating the flesh of a l l creatures ; consequently o should not take fish.

[Truth] To be continued

ಸತ್ಯ ಮತ್ತು ಅಹಿಂಸೆ

(ಮಹಾತ್ಮಾ ಗಾಂಧಿಯವರ ಸಂದೇಶ – ಲೇ ; ಶ್ರೀ ಯು.ಎಸ್.ಮೋಹನರಾವ್)

ಅಹಿಂಸೆ ಮತ್ತು ಸತ್ಯ, ಒಂದೊಂದು ಹೆಣೆದುಕೊಂಡು ಬೆರೆತುಹೋಗಿದೆ ; ಪ್ರತ್ಯೇಕಿಸುವುದು ಪಾಸ್ತವಿಕವಾಗಿಯೂ ಅಸಾಧ್ಯವಾಗಿದೆ ; ಸತ್ಯ ಮತ್ತು ಅಹಿಂಸೆ ಯಾವ ಮುದ್ರೆಯ ಅಚ್ಚೂ ಇಲ್ಲದ ಲೋಹದ ತಟ್ಟೆಯ ಅಥವಾ ನಾಣ್ಯದ ಎರಡು ಮುಖಗಳಂತಿವೆ ; ಇದರಲ್ಲಿ ಯಾವುದು ಮೇಲ್ಮುಖ, ಯಾವುದು ಕೆಳಮುಖ ಎಂದು ಹೇಳಲು ಸಾಧ್ಯವಿಲ್ಲ ; ಆದಾಗ್ಯೂ ಸತ್ಯವೆ ನಮ್ಮ ಗುರಿಯಾದರೆ ಈ ಗುರಿಯನ್ನು ತಲುಪಲು ಅಹಿಂಸೆಯು ಒಂದು ಸಾಧಕವಾಗಿದೆ. ನಮ್ಮ ಧ್ಯೇಯ ಸಾಧನೆಗಾಗಿ ನಾವು ಅನುಸರಿಸುವ ಮಾರ್ಗ, ನಾವು ಕೈಗೊಳ್ಳುವ ಸಾಧನೆ ಸರಿಯಾಗಿದ್ದಲ್ಲಿ, ಇಂದಲ್ಲ, ನಾಳೆ ನಾವು ನಮ್ಮ ಗುರಿಯನ್ನು ತಲುಪೇ ತಲುಪುತ್ತೇವೆ ; ನಾವು ಈ ಅಂಶವನ್ನು ಗ್ರಹಿಸಿಕೊಂಡಲ್ಲಿ ನಮಗೆ ಜಯ ದೊರೆಯಲೆ ಬೇಕು. ನಮ್ಮ ಧ್ಯೇಯ ಸಾಧನೆಗಾಗಿ, ನಮ್ಮ ಗುರಿಯನ್ನು ತಲುಪುವುದಕ್ಕಾಗಿ ನಾವು ಮುನ್ನಡಿಯಿಟ್ಟಾಗ, ಅನೇಕ ಕ್ಲಿಷ್ಟ ಪರಿಸ್ಥಿತಿಗಳನ್ನೂ ಪರಾಭವವನ್ನೂ ಎದುರಿಸಬೇಕಾಗಬಹುದು. ಆಗಲೂ ಸಹ ನಾವು ನಮ್ಮ ಪಟ್ಟು ಬಿಡದೆ ಮುನ್ನಡೆಯುವದು ಅಗತ್ಯವಾಗಿದೆ. ಸತ್ಯಕ್ಕಾಗಿ ನಾವು ನಡೆಸುವ ಈ ಪ್ರಯತ್ನ, ದೇವರನ್ನು ಕಾಣುವ ಪ್ರಯತ್ನವಾಗಿದೆ.

ಅಹಿಂಸೆಯು ನಮ್ಮ ಗುರಿಯಾಗಿರುವೆ ಸತ್ಯವು ನಮ್ಮ ಸಾಧನೆಯ ಗುರಿಯಾಗಿದೆ ; ಈ ಸತ್ಯವನ್ನು ಒಡ್ಡಿ ಒಕೊಳ್ಳಬೇಕಾದರೆ, ನಾವು ನಮ್ಮ ನಿತ್ಯದ ಜೀವನದಲ್ಲಿ ಅಹಿಂಸೆಯನ್ನು ರೂಢಿಸಿಕೊಳ್ಳದೆ ಅನ್ಯ ಮಾರ್ಗವಿಲ್ಲ. ಪ್ರಜ್ಞಾಪೂರ್ವಕವಾಗಿ ಅಹಿಂಸೆಯ ಮಾರ್ಗವನ್ನು ಅನುಸರಿಸಿಕೊಂಡು ಬಂದಲ್ಲಿ ಅದು ನಮ್ಮನ್ನು ಸತ್ಯದತ್ತ ಕರೆದೊಯ್ಯುತ್ತದೆ ; ಅದರಿಂದ ಹಿಂಸೆಯಿಂದ ಇದು ಸಾಧ್ಯವಿಲ್ಲ ; ಆದ್ದರಿಂದಲೇ ನನಗೆ ಅಹಿಂಸೆಯಲ್ಲಿ ಅಚಲ ನಂಬಿಕೆ ಇದೆ ; ಸತ್ಯವು ನನಗೆ ತಾನೇ ತಾನಾಗಿ ಸಹಜವಾಗಿ ಒಡ್ಡಿಸಿತು ; ಅಹಿಂಸೆಯನ್ನು ಒಡ್ಡಿಸಿಕೊಳ್ಳುವುದಕ್ಕಾಗಿ ಮಾತ್ರ ನಾನು ಹೋರಾಡಿದ್ದೇನೆ

ಅಹಿಂಸೆಯು ನಾವು ಅನುಸರಿಸಬೇಕಾದ ಮಾರ್ಗವಾಗಿರುವುದರಿಂದ ದಿನನಿತ್ಯ ಜೀವನದಲ್ಲಿ ಅದನ್ನು ರೂಢಿಸಿಕೊಳ್ಳಲು ಪ್ರಯತ್ನಿಸುವದು, ಅದಂಲ್ಲಿ ಅಪಕ್ತಿ ವಹಿಸುವದು ಸಹಜವಾಗಿದೆ ; ಆದ್ದರಿಂದಲೇ ಅಹಿಂಸೆಯು ಮಾರ್ಗವನ್ನು ಅನುಸರಿಸುವಂತೆ ಅಹಿಂಸೆಯಲ್ಲಿ ಅಪಕ್ತಿ ವಹಿಸುವಂತೆ ಸಾರ್ವಜನಿಕರಿಗೆ ಬೋಧಿಸಬೇಕು ; ಈ ಬೋಧನೆಯ ವಿಚಾರ ಪಾಠಿಯಿಂದ ಸತ್ಯನಿತ್ಯವೆಂಬುದನ್ನು ನಾವು ಮನಗಾಣಬೇಕು

ಅಹಿಂಸೆಯು ನನ್ನ ದೇವರು, ಮತ್ತು ಸತ್ಯ. ಸತ್ಯವೇ ನನ್ನ ಪರಮಾತ್ಮ ; ಅಹಿಂಸೆಯ ಅನ್ವೇಷಣೆಯಲ್ಲಿದ್ದಾಗ, ಅದರ ನಿರೀಕ್ಷಣೆಯಲ್ಲಿದ್ದಾಗ, ಸತ್ಯದ ಮೂಲಕ ಅದನ್ನು ಕಂಡುಕೊಳ್ಳಬಹುದೆಂಬುದು ವಿವೇಕವಾಗುತ್ತದೆ ; ಇದೇ ರೀತಿ ಸತ್ಯಕ್ಕಾಗಿ ಹಂಬಲಿಸುವಾಗ ಅಹಿಂಸೆಯ ಮೂಲಕ ಅದನ್ನು ಒಡ್ಡಿಸಿಕೊಳ್ಳಬಹುದೆಂಬುದು ಸುಸ್ಪಷ್ಟವಾಗುತ್ತದೆ

ಹೊಸ ವಿಚಾರವನ್ನಾಗಲೀ, ಹೊಸ ತತ್ವವನ್ನಾಗಲೀ ನಾನು ಬೋಧಿಸುತ್ತಿಲ್ಲ; ಸತ್ಯ ಮತ್ತು ಅಹಿಂಸೆ ಬಹಳ ಹಿಂದೆಯೇ ಪ್ರತಿಪಾದಿಸಲ್ಪಟ್ಟ ಪ್ರಾಚೀನ ತತ್ವಗಳಾಗಿವೆ ; ಈ ಪ್ರಾಚೀನ ತತ್ವಗಳ ಬಗ್ಗೆ, ಈ ಅಂಶಗಳ ಬಗ್ಗೆ ವಿಶಾಲವಾದ ಪ್ರಮಾಣದಲ್ಲಿ, ಪ್ರಯೋಗಗಳನ್ನು ಮಾತ್ರ ನಾನು ಪ್ರಯತ್ನಿಸುತ್ತಿದ್ದೇನೆ ; ಈ ಪ್ರಯತ್ನದಲ್ಲಿ ಈ ಪ್ರಯತ್ನದಲ್ಲಿ, ಈ ಪ್ರಯೋಗಗಳಲ್ಲಿ ನಾನು ಎಷ್ಟೋ ಸಲ ತಪ್ಪು ಮಾಡಿದ್ದೇನೆ, ಮತ್ತು ಈ ತಪ್ಪುಗಳಿಂದ ಬುದ್ಧಿ ಕಲಿತುಕೊಂಡಿದ್ದೇನೆ ; ಇದರಿಂದ ಜೀವನ ಮತ್ತು ಜೀವನದಲ್ಲಿನ ವಿವಿಧ ಸಮಸ್ಯೆಗಳು, ಸತ್ಯ ಮತ್ತು ಅಹಿಂಸೆಯನ್ನು ರೂಢಿ ಮಾಡಿಕೊಳ್ಳುವಲ್ಲಿ, ಆಚರಣೆಗೆ ತರುವಲ್ಲಿ ಸದವಕಾಶಗಳನ್ನು ಒದಗಿಸಿದಂತಾಗಿದೆ.

ಸಹಜ ಪ್ರವೃತ್ತಿಯಿಂದ ನಾನು ಸತ್ಯವಾದಿಯಾಗಿದ್ದೇನೆ ; ಆದರೆ ಅಹಿಂಸಾವಾದಿಯಾಗಿಲ್ಲ ; ನಾನು ಅಹಿಂಸೆಗಿಂತ ಸತ್ಯಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿರುವುದಾಗಿಯೂ, ನಾನು ಅಹಿಂಸಾವಾದಿಯಾಗಿರದೆ ಸತ್ಯವಾದಿಯಾಗಿರುವದಾಗಿಯೂ ಮುನಿಗಳೊಬ್ಬರು ಹೇಳಿರುವುದು ನಿಜವಾಗಿದೆ. ಸತ್ಯಕ್ಕಾಗಿ ಅಹಿಂಸೆಯನ್ನು ಬಲಿ ಕೊಡಲು, ಅದನ್ನು ತ್ಯಜಿಸಲು ನಾನು ಹಿಂದೆ ಮುಂದೆ ನೋಡುವುದಿಲ್ಲ ; ಸತ್ಯದ ಅನ್ವೇಷಣದಲ್ಲಿದ್ದಾಗ ನಾನು ಅಹಿಂಸೆಯನ್ನೆರಿತುಕೊಂಡೆನೆಂಬುದು ವಾಸ್ತವಿಕ ಸಂಗತಿಯಾಗಿದೆ.

GORAKSHANA

[Statement of Ownership]

Place of publication	Mysore
Periodicity of its publication	Mohthly
Name, Natioality and address of the Printer, Publisher, Editor and Owner of the Newspaper	M.S.Krishna Rao, Indian 1067 Chamarajapuram Mysore 4

I, M. S. Krishna Rao, hereby declare that the particulars given above are true to the best of my knowledge and belief.

2-3-1974 M S. Krishna Rao

ಅಕಳಂಗಳಿಗೆ ಆನಂದದಾಯಕ ಆನಂದ ಸಂವತ್ಸರ

ಪಾಲ್ಗುಣ ಹುಣ್ಣಿಮೆ. ಪಲ್ಗುಣ ! ಉತ್ತರ ಗೋಗ್ರಹಣದ ಜ್ಞಾಪಕ ತಟ್ಟನೆ ಬರುತ್ತದೆ ; ಕೌರವ ಪಡೆಯು ಗೋಸಂಪತ್ತನ್ನು ಒಂದಿಷ್ಟು ಅಟ್ಟಿಕೊಂಡುಹೋಗುತ್ತಿದ್ದಾಗ ಅದಕ್ಕೆ ಅಡ್ಡಿ ಬಂದುಬಿಟ್ಟಿತು ; ಅರ್ಜುನನು ಅವುಗಳನ್ನು ಬಿಡಿಸಿ ತರುತ್ತಾನೆ ; ಆದರೆ ಇಂದು ? ಅಧಿಕಾರದಲ್ಲಿರುವವರು ಗೋಸಂಪತ್ತಿನ ನಾಶನಲ್ಲಿ ಸಲುಬದ್ಧ ಕಂಕಣರಾಗಿರುವಂತೆ ಭಾಸವಾಗುತ್ತಿಲ್ಲ ಬೃಹನ್ನಳೆಗಳು ನೈಜ ಬೃಹನ್ನಳೆಗಳೇ ಆಗಿರುವರು. ಗೋಹತ್ಯೆ ಕಾನೂನು ಅದೆಂದು ದಹನವಾಗುತ್ತದೋ ! ಅದು ದಹನವಾಗಬೇಕಾದಲ್ಲಿ ಜನತಾ ಜಗದೀಶ್ವರನು ಗೋಭಕ್ತಿಯ ತೃತೀಯ ಕಣ್ಣನ್ನು ತೆಕೆಯಬೇಕು ; ಆ ಲಕ್ಷಣ ಕಂಡುಬರುತ್ತಿಲ್ಲ ; ಹೋಳೀಹಬ್ಬ ಕೇವಲ ರಂಗುರಂಗಿನ ಬಣ್ಣದ ಹಬ್ಬವಾಗಿಬಿಟ್ಟಿದೆ.

ಅದಾದಮೇಲೆ ಚಿತ್ರವಿಚಿತ್ರ ಚೈತ್ರಮಾಸ ಆರಂಭ ; ರಾಷ್ಟ್ರೀಯ (ಸರಕಾರಿ) ಶಕಾರಂಭವಾಗುತ್ತದೆ ; ಅದ್ಯಾವ ಹೊಸ ಶಕ ಆರಂಭವಾದರೂ ಗೋ ಮಾತೆಗೆ ಮಾತ್ರ ಅದೇ ಹಳೆಯ ಶಕವೇ ! – ಕೊಲೆಸಾತಕ ಶಕವೇ ಇದೆ.

ಚಂದ್ರಮಾನ ಯುಗಾದಿ – ಆನಂದ ಸಂವತ್ಸರದ ಆರಂಭ.

" ಗೋರಕ್ಷಣ ' ದಲ್ಲಿ ಗೋಬ್ರಾಹ್ಮಣ " ಲೇಖನ ಬರುತ್ತಿತ್ತು ; ಯುಗಾದಿಯೆಂದು ಅಂತಹ ಇನ್ನೊಂದು ಸನ್ನಿವೇಶ ಜ್ಞಾಪಕಕ್ಕೆ ಬರುತ್ತದೆ ; ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಸ್ಥಾಪಿಸಿರುವ ಪರಮಪೂಜನೀಯ ಬಲಿರಾಮ ಹೆಡ್ಗೇವಾರರು ಜನಿಸಿದ ಪರ್ವದಿನವದು. ಗೋಹಂತಕರು ಕೊಲೆಮನೆಗೆ ಗೋಮಾತೆಯನ್ನೆಳೆಯುವ ದೃಶ್ಯ ಅವರ ಕಣ್ಣಿಗೆ ಬಿತ್ತು ; ಪಶುನಾಶಕರಿಂದ ಅವನ್ನವರು ಬಿಡಿಸಿದರು ; ಗೋರಕ್ಷಣೆಗಾಗಿ, ಗೋಹತ್ಯೆ ಪ್ರತಿಬಂಧಕಕ್ಕಾಗಿ ಅವರು ಪರಿಶ್ರಮಿಸಿರುವ ಕಾರಣ, ರಾಷ್ಟ್ರೀಯ ಸ್ವಯಂಸೇವಕ ಸಂಘವು ಇಂದೂ ಪಶುವಧೆ ಪ್ರತಿಬಂಧಕ್ಕಾಗಿ ಇಂದೂ ಪ್ರಯತ್ನಿಸುತ್ತಲಿದೆ ; ಗಲುವು ಕಟ್ಟಿಟ್ಟ ಗಂಟೆಂಬ ಅದರ ಅಚಲ ನಂಬಿಕೆ ಅತಿ ಕ್ಷಿಪ್ರದಲ್ಲೇ ನೆರೆವೇರಲಿ ಅಕಳಂಗಳಿಗೆ ಆನಂದ ಸಂವತ್ಸರವು ಆನಂದದಾಯಕವಾಗಲಿ ; ಗೋವಧೆ ಕೂಡಲೇ ನಿಲ್ಲಲಿ — ಶಿವಶಂಕರ

ವಿವಿಧ ವಿಧದ ಪಕ್ಷಿಗಳು

ಮಹಾರಾಷ್ಟ್ರದಲ್ಲಿ 525 ವಿಧದ ಪಕ್ಷಿಗಳಿವೆ — ಕರ್ನಾಟಕದಲ್ಲಿ ಶ್ರೀರಂಗಪಟ್ಟಣದ ಹತ್ತಿರ ರಂಗನತಿಟ್ಟಿಯಲ್ಲಿಯ ಪಕ್ಷಿಧಾಮದಲ್ಲಿ ಅನೇಕ ವಿಧದ ಪಕ್ಷಿಗಳಿವೆ

ಜಪಾನಿನಿಂದ ಮದರಾಸಿಗೆ ಹಾವಿನ ಸಾಗಾಟ

ಮದರಾಸಿನಲ್ಲಿ ರೋಗಗ್ರಸ್ತ ವಿಟೇಕರರ ಮೇಲ್ವಿಚಾರಣೆಯಲ್ಲಿರುವ ಪ್ರಸಿದ್ಧವಾದ ಹಾವಿನ ಕೇಂದ್ರಕ್ಕೆ ಜಪಾನಿನಿಂದ ಅಲ್ಲಿಯ ಸರಕಾರವು ಉದಾರದಾನ ಮಾಡಿ ವಿಮಾನ ಮೂಲಕ ಕಳಿಸಿದೆ.

ಹಾಲು ಉತ್ಪಾದನೆ

ಬೆಂಗಳೂರು – ರಾಜ್ಯದಲ್ಲಿ ಹಾಲುಉತ್ಪಾದನೆ ಹೆಚ್ಚಿಸುವ ಪ್ರಯತ್ನಕ್ಕೆ 5ನೆ ಯೋಜನೆಯಲ್ಲಿ ಡೈರಿ ಅಭಿವೃದ್ಧಿಗೆ ರೂ.1125 ಲಕ್ಷ ಖಂಡವಾಳದ ಕಾರ್ಯಕ್ರಮವನ್ನು ಸರ್ಕಾರ ತಯಾರಿಸಿದೆ – 4 ನೇಯೋಜನೆಯಲ್ಲಿ ರೂ 285 ಲಕ್ಷ ಅವಕಾಶ ಮಾತ್ರ ಇತ್ತು

ಕರ್ನಾಟಕ ಮತ್ತು ರೇಷ್ಮೆ

ಕರ್ನಾಟಕ ರಾಜ್ಯ, ರೇಷ್ಮೆ ಕ್ಷೇತ್ರವನ್ನು ಪ್ರಗತಿಪಥದಲ್ಲಿ ಕೊಂಡೊಯ್ಯಲು ಸಿದ್ಧವಾಗಿದೆ. ಉದ್ಯೋಗಾವಕಾಶ ಕಲ್ಪಿಸಿಕೊಡುವ ಈ ಕೈಗಾರಿಕೆ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ತಮ್ಮ ವರಮಾನವನ್ನು ಹೆಚ್ಚಿಸಿಕೊಳ್ಳುವುದಲ್ಲದೆ, ವಿದೇಶಿ ವಿನಿಮಯ ಗಳಿಸಿಕೊಳ್ಳುವಲ್ಲಿಯೂ ದೇಶಕ್ಕೆ ಸಹಾಯವಾಗುತ್ತದೆ.

ದೇಶದಲ್ಲಿನ ಉಪ್ಪುನೇರಳೆ ರೇಷ್ಮೆ ಒಟ್ಟು ಉತ್ಪನ್ನಕ್ಕೆ ಕರ್ನಾಟಕದ ಕೊಡುಗೆ ಶೇಖಡ 80 ರಷ್ಟಿದ್ದು, ಇಲ್ಲಿನ ರೇಷ್ಮೆ ಹಾಗೂ ರೇಷ್ಮೆ ಉಡುಪುಗಳು ಯಾವಾಗಲೂ ಪ್ರಸಿದ್ಧವಾದವು. ನಾಲ್ಕನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ರಾಜ್ಯದ ರೇಷ್ಮೆಯ ವಾರ್ಷಿಕ ಉತ್ಪನ್ನ 14 ಲಕ್ಷ ಕೆ. ಜಿ. ಯಿಂದ 20 ಲಕ್ಷ ಕೆ. ಜಿ. ಗೆ ಏರಿತು. ರೇಷ್ಮೆ ಕ್ಷೇತ್ರದ ಈ ಸಾಧನೆಗೆ "ಬೈವೋಲ್ಟೈನ್" ಮಿಶ್ರತಳಿ ರೇಷ್ಮೆ ಹುಳುಗಳ ಸಾಕಾಣಿಕೆಯೇ ಕಾರಣ. ಇವು ಉತ್ಪನ್ನವನ್ನು ದ್ವಿಗುಣಗೊಳಿಸುವ ಆಶಾದಾಯಕ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಮುಖ್ಯಾಧಿಕಾರಿಗಳು,
ಪಾರ್ಕ್ ಮತ್ತು ಪ್ರಚಾರ ಇಲಾಖೆ,
ಕರ್ನಾಟಕ ಸರ್ಕಾರ,
ಇವರಿಂದ ಪ್ರಕಟಿತ.

ಮುಕ್ತಾಹಾರಿ– ಯೂರೋಪೀಯ ದೇಶ ಧರ್ಮದೆಡೆಗೆ !

ಮತ್ತೆ ಭಾರತ ಯಾವ ಕಡೆಗೆ ?

(ಶ್ರೀ ಮಹೇಶ್ವರದತ್ತ ಶರ್ಮರ ಹಿಂದಿ ಲೇಖನದ ಅನುವಾದ ವೆನ್ನಮೂರಿಂದ)

●

ಕೋಳಿಮೊಟ್ಟೆಯಲ್ಲಿ ಎರಡು ಪ್ರಕಾರ– ಒಂದು ಉತ್ಪಾದಕ (ಫರ್ಟೈಲ್) ಇನ್ನೊಂದು ಅನುತ್ಪಾದಕ (ಅನ್‌ಫರ್ಟೈ) ; ಮೊಟ್ಟೆಯು ಉತ್ಪಾದಕ ಶ್ರೇಣಿಯದಾಗಿದ್ದರೆ ಅದು ಒಂದು ಶಿಶುಕೋಳಿಯ ಭ್ರೂಣವನ್ನು ಗುಣಪಡಿಸಲಾಗಿರುತ್ತದೆ ; ಅದನ್ನು ತಿನ್ನುವುದು ಎಂದರೆ ಒಂದು ಕಣ್ಣು ಪ್ರಾಣಿಯ ಕೊಲೆ ಸಮಾನವೇ ಆಗಿದೆ. ಒಂದು ವೇಳೆ ಮೊಟ್ಟೆಯು ಅನುತ್ಪಾದಕವಾದುದಾದರೆ ಅದರಲ್ಲಿರುವ ಶರೀರ ರಚನೆ ಮತ್ತು ಶಾರೀರಕ ತತ್ವಗಳನ್ನು ಪರಿತೀಲಿಸಬೇಕಾಗುವುದು ಏಕೆಂದರೆ ಮೊಟ್ಟೆಯು ಕೋಳಿಯ ಶಾರೀರಕ ಕಲ್ಮಷ ವಸ್ತ್ರ. ವೈಜ್ಞಾನಿಕ ದೃಷ್ಟಿಯಿಂದ ಮೊಟ್ಟೆಯು ಅಧಿಕ ಕಫೋತ್ಪಾದನೆ ಮಾಡುವಂತಹುದು, ಮತ್ತು ಮಾನವ ಶರೀರದಲ್ಲಿ "ಕೊಲೆಸ್ಟ್ರೋಲ್" ನ ಅಂಶವನ್ನು ಹೆಚ್ಚಿಸುತ್ತದೆ ; ಕೊಲೆಸ್ಟ್ರೋಲ್ ಒಂದು ವಿಷಾಕ್ತ ಪದಾರ್ಥ.

ರಾಷ್ಟ್ರೀಯ ಡೆಯಿರಿ (ಕ್ಷೀರ ಕೇಂದ್ರ) ಅನುಸಂಧಾನಶಾಲೆಯ – ಕರನಾಲ್‌ನಲ್ಲಿರುವ – ವಿಶೇಷಜ್ಞ ಶ್ರೀ ಸಿ. ಎ ಥಾಮಸ್‌ರವರ ಮತಾನುಸಾರ ಶರೀರವನ್ನು ಸ್ವಸ್ಥವಾಗಿಡಲು ಪ್ರೋಟೀನ್, ಕ್ಯಾಲ್ಸಿಯಂ ಮತ್ತು ವಿಟಮಿನ್ ಅವಶ್ಯಕ ; ಹಾಲಿನಲ್ಲಿ ಇವು ಮೂರು ಇರುತ್ತವೆ ; ಅದುದರಿಂದಲೇ ಹಾಲಿಗೆ ಪೂರ್ಣ ಭೋಜನವೆಂದು ಕರೆಯುತ್ತಾರೆ.

ಇಂಗ್ಲೆಂಡ್ ನ್ಯಾಷನಲ್ ಇನ್‌ಸ್ಟಿಟ್ಯೂಟಿನ ಡೆಯಿರಿ ರಿಸರ್ಚ್ ಡೈರೆಕ್ಟರರಾದ ಡಾ॥ ಹೆಚ್ ಕೆ ಯವರ ಸಮ್ಮತಿಯು– ರಾಷ್ಟ್ರದ ಜನಸ್ವಾಸ್ಥ್ಯ ಸುಧಾರಿಸಬೇಕಾದರೆ ದುಗ್ಧಪಾನ ಹಾಗೂ ಕ್ಷೀರಕೃತ ಪದಾರ್ಥಗಳನ್ನು ಅಧಿಕಾಧಿಕವಾಗಿ ವ್ಯವಹಾರದಲ್ಲಿ ಬರುವಂತೆ ಪರ್ಯಾಪ್ತ ಪ್ರಚಾರ ಮಾಡಲೇಬೇಕು– ಎಂದಿರುತ್ತದೆ.

ಇಂಗ್ಲೆಂಡಿನ ಇನ್ನೊಬ್ಬ ಡಾಕ್ಟರು ಹೆಚ್. ಸಿ ಕೇರಿಮನ್– ಮಕ್ಕಳಿಗೆ ಸಾಕಷ್ಟು ಹಾಲು ಕೊಟ್ಟರೆ ಅವರ ತೂಕ ಮತ್ತು ಎತ್ತರ ಪರ್ಯಾಪ್ತ ರೀತಿಯಲ್ಲಿ ವೃದ್ಧಿಯಾಗಿ ಪೂರ್ಣ ರೂಪದಲ್ಲಿ ಶಾರೀರಕ ಸುಧಾರಣೆಯು ಆಗುತ್ತದೆ, ಎಂದು ಬರೆದಿರುತ್ತಾರೆ.

ಡಾ॥ ರಾಬರ್ಟ್ ಗೋಸ್ ಮತ್ತು ಪ್ರೊ॥ ಇರ್ವಿನ್ ಡೇವಿಡ್‌ಸನ್– ಮನುಷ್ಯನ ಶರೀರದ ರಕ್ತದಲ್ಲಿ ಸುಮಾರು 20 ಗ್ರೇನ್ ಕೊಲೆಸ್ಟ್ರೋಲ್ ಎಂಬ ಮದ್ಯ ಕಂಡುಬರುತ್ತದೆ. ಇದೇ ಹಾರ್ದಿಕ ರೋಗವನ್ನುಂಟು ಮಾಡುವುದು ; ಮೊಟ್ಟೆಯಲ್ಲಿನ ಹೆಳದಿ ಬಣ್ಣದ ಗುಟ್ಟಿಯಲ್ಲಿ 4 ಗ್ರೇನ್ ಕೊಲೆಸ್ಟ್ರೋಲ್ ಇರುತ್ತದೆ ; ಮಾನವ ಮಾನವ ಶರೀರದಲ್ಲಿ ಈ ಕೊಲೆಸ್ಟ್ರೋಲ್‌ನ ಅಂಶವು ಅಧಿಕವಾಗಿರುವುದರಿಂದ, ಹೈ ಬ್ಲಡ್ ಪ್ರಷರ್, ಯಕೃತ್, ಪ್ಲೀಹ ಕಫಾ ವಾತ ರೋಗವೇ ಆದಿಯಾಗಿ ಅನೇಕ ವ್ಯಾಧಿಗಳು ಉತ್ಪನ್ನವಾಗುತ್ತವೆ ಮೊಟ್ಟೆಯಲ್ಲಿ ನೈಟ್ರೋಜನ್‌ನಂಥ ವಿಷಾಕ್ತ ಗ್ಯಾಸು, ಫಾಸ್ಫರಸ್ ಏಸಿಡ್ ಅಧಿಕ ಪ್ರಮಾಣದಲ್ಲಿ ಮತ್ತು ಚರ್ಬಿ ಇರುತ್ತವೆ ; ಆದುಕಾರಣ ಮೊಟ್ಟೆ ಶರೀರದಲ್ಲಿ ಹುಳಿ ಅಂಶವನ್ನು ಹೆಚ್ಚು ಮಾಡಿ ಅನೇಕ ಪ್ರಕಾರದ ಉದರ ವ್ಯಾಧಿಯನ್ನು ಉಂಟುಮಾಡುತ್ತದೆ– ಎಂದು ಬರೆದಿರುತ್ತಾರೆ.

ಡಾ॥ ಎ ಜಿ ಆರ್. ಮೆಕ್ಕೆನಾಲ್ಡ್‌ರವರು 'ದಿ ನೇಚರ್ ಆಫ್ ಡಿಸೀಸ್' ಜರ್ನಲ್‌ನಲ್ಲಿ– ಕೋಳಿತುರಿಗಳಲ್ಲಿ ಬಹು ಪ್ರಕಾರದ ಖಾಯಿಲೆಗಳಾಗುತ್ತವೆ ; ಮೊಟ್ಟೆಯು ಅಂತಹ ರೋಗಗಳ, ಮುಖ್ಯತಃ ಕ್ಷಯ ರೋಗದ ಕೀಟಾಣುಗಳನ್ನು ಪಡೆದಿರುತ್ತವೆ ; ಮೊಟ್ಟೆಯಲ್ಲಿನ ಶ್ವೇತಾಂಶವು ಎಲ್ಲಕ್ಕಿಂತಲೂ ಅಧಿಕ ಹಾನಿಕಾರಕವು ; ಈ ಶ್ವೇತಾಂಶವನ್ನು ತಿನ್ನಿಸಿದ ಪಶುಗಳಿಗೆ ಲಕ್ವಾ ಹೊಡೆದಿರುತ್ತದೆ, ಹಾಗೂ ಚರ್ಮ ರೋಗಗಳು ಉಂಟಾಗಿರುತ್ತವೆ– ಎಂದು ತಿಳಿಸಿರುತ್ತಾರೆ.

ವಿಗತ ವರ್ಷದ ಭಾರತ ಸರಕಾರದಿಂದ ಪ್ರಕಾಶಿತವಾದ ಹೆಲ್ತ್ ಬುಲೆಟಿನ್ 23 ರಲ್ಲಿ– ಮೊಟ್ಟೆ, ಮಾಂಸ ಮತ್ತು ವಿಮಾನುಗಳಲ್ಲಿ ಕಾರ್ಬೋಹೈಡ್ರೇಟ್ಸ್ ಮತ್ತು ಕ್ಯಾಸಿಯಂ ಬಹಳ ಕಮ್ಮಿ ಇರುತ್ತದೆಯಾದ್ದರಿಂದ ಸರ್ವಸಾಧಾರಣ ಜನ ಮತ್ತು ಮಕ್ಕಳು ಮೊಟ್ಟೆಯನ್ನು ಆಹಾರ ಪದಾರ್ಥವಾಗಿ ಉಪಯೋಗಿಸುವುದಕ್ಕೆ ಉಚ್ಚ ಪದಾಧಿಕಾರಿಗಳು ಪ್ರೋತ್ಸಾಹನ ಕೊಡುವುದೂ ತುಂಬಾ ಹಾನಿಕಾರಕವೆಂದು ಸ್ಪಷ್ಟವಾಗುತ್ತದೆ.

[ಮುಂದುವರಿಯುವುದು

ಕೊಡಗಿನವರ ನಿರ್ಧಾರ

ಬೆಂಗಳೂರು— ಕೊಡಗಿನ ಕಂಬಹರಡಪ್ರಾಜೆಕ್ಟನ್ನು ಸೆರೆವೀರಿಸಲು ಸರಕಾರ ನಿರ್ಧರಿಸಿದರೆ. ಕೊಡಗು ಜನತೆ ಪ್ರತ್ಯೇಕ ಕೊಡಗು ರಾಜ್ಯಕ್ಕಾಗಿ ಚಳುವಳಿ ಹೂಡಬೇಕಾಗುವುದೆಂದು ಕೊಡಗು ರಕ್ಷಣಾ ಸಮಿತಿ ಸರಕಾರಕ್ಕೆ ಎಚ್ಚರಿಕೆ ನೀಡಿದೆ.

ಪುಸ್ತಕಗಳ ರಾಶಿ ಬಿದ್ದಿದ್ದರೂ, ಹೊಸ ಪ್ರಕಟನೆ ಪ್ರತಿಬಂಧಿಸುವದಿಲ್ಲ

ನವದೆಹಲಿ— ನ್ಯಾಷನಲ್ ಬುಕ್ ಟ್ರಸ್ಟ್‌ನಲ್ಲಿ ಈಗ ಮಾರಾಟವಾಗದೆ ರೂ. 1 ಕೋಟಿಗೂ ಹೆಚ್ಚಿನ ಬೆಲೆಯ ಪುಸ್ತಕಗಳು ಮಾರಾಟವಾಗದೆಬಿದ್ದಿದ್ದರೂ, ಹೊಸ ಪ್ರಕಾಶನಗಳನ್ನು ಪ್ರತಿಬಂಧಿಸುವುದಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಸಾಂಕೇತಿಕ ಮುಷ್ಕರ

ಅಹಮದಾಬಾದು— ಬಹುಕಾಲದಿಂದ ನೆನೆಗುದಿಗೆ ಬಿದ್ದಿರುವ ತಮ್ಮ ಕೇಳಿಕೆಗಳನ್ನು ಒತ್ತಾಯಮಾಡಲು ಗುಜರಾತಿನ 3 ಲಕ್ಷ ಸರ್ಕಾರಿ ನೌಕರರು ಏಪ್ರಿಲ್ 9 ರಂದು ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಲು ನಿರ್ಧರಿಸಿರುವರು.

ಕರ್ನಾಟಕ ಜಾನಪದ ನೃತ್ಯಗಳಲ್ಲಿ ಪ್ರಧಾನಿಯವರ ಆಸ್ಥೆ

ಬೆಂಗಳೂರು— ದೆಹಲಿಯಲ್ಲಿ ಕರ್ನಾಟಕ ಸರಕಾರವು ಮತ್ತು ಭಾರತ ಪ್ರವಾಸಿ ಅಭಿವೃದ್ಧಿ ಕಾರ್ಪೋರೇಷನ್ ಸಂಯುಕ್ತ ಆಶ್ರಯದಲ್ಲಿ ತಾ|| 19 ರಂದು ಏರ್ಪಡಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಕರ್ನಾಟಕದ ವಿವಿಧ ಜಾನಪದ ನೃತ್ಯಗಳಾದ " ಕರಡಿ ಮಜಲ್ " " ಬೀಸು ಕಂಸಾಳೆ "," ಕರಗ " " ಸೋಮನ ಕುಣಿತ" ಕೀಲು ಕುದುರೆ ಮುಂತಾದವುಗಳನ್ನು ವೀಕ್ಷಿಸಿದ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

★

ಪಂಚಾಂಗ ಸ್ವೀಕಾರ

ದೈವಜ್ಞ ಶಿರೋಮಣಿ, ಇತ್ಯಾದಿ ಅನೇಕ ಬಿರುದಾಂಕಿತರಾದ, ಅಸ್ಥಾನ ಮಹಾ ವಿದ್ವಾನ್ ಶ್ರೀ ಸಂಪತ್ಕೃಷ್ಣ ಜೋಯಿಸರವರ ಪುತ್ರರು, ಜೋತಿಷ, ಧರ್ಮಶಾಸ್ತ್ರ ವಿದ್ವಾನ್ ಶ್ರೀ ನ ಕೃಷ್ಣಜೋಯಿಸರಿಂದ ಗುಣಿಸಲ್ಪಟ್ಟು ಪರಿಶೋಧಿಸಲ್ಪಟ್ಟರುವ ಆನಂದ ಸಂವತ್ಸರದ ಪಿದ್ಧಾಂತ ಮತ್ತು ವಾಕ್ಯ ಪಂಚಾಂಗವನ್ನು ಸ್ವೀಕರಿಸಿದ್ದೇವೆ. ಇದರಲ್ಲಿ ದಿನ ನಿತ್ಯ ತಿಳಿಯಬೇಕಾದ ಅನೇಕ ಜೋತಿಷ್ಯ ವಿಷಯಗಳೂ, ರಾತಿಗಳ ಗೋಚಾರ ಫಲ, ವಿವಾಹೋಪನಯನ ಲಗ್ನಗಳೂ, ರಥೋತ್ಸವಗಳೂ ಮುಂತಾದ ಪುಗಳೂ ಇವೆ. ಮನೆಯಲ್ಲಿ ಒಬ್ಬ ಪುಟ್ಟ ಜೋಯಿಸರೇ ಇದ್ದಂತಿದೆ.

5000 ವರ್ಷಗಳ ಹಿಂದೆಯೇ ಗೊತ್ತಿತ್ತು

ನವದೆಹಲಿ— ಈಗಿನ " ವಿಾಟರ್ " ಅಳತೆಗೆ ಸಾಮಾರ್ಥ್ಯವಾದ ಅಳತೆ ವಿಜ್ಞಾನವು 5000 ವರ್ಷಗಳ ಹಿಂದೆಯೂ ಸಿಂಧೂ ಕಣಿವೆ ನಾಗರೀಕತೆಗೆ ಗೊತ್ತಿದ್ದಿತೆಂದು ವಿಮಾನ ದಳದ ಅಧಿಕಾರಿ ಶ್ರೀ ಬ್ರಿಜ್ ಭೂಷಣರು ಹೇಳಿರುವರು.

ಮಂಗಳ ಗ್ರಹ

ನವದೆಹಲಿ— ಮಂಗಳ ಗ್ರಹದ ಮೇಲಿನ ಭಾಗದಲ್ಲಿ ಒಣಗಿದ ನದಿ ದಡಗಳು ಕಾಣಬಂದಿರುವುದೆಂದು ರಷ್ಯಾ ವಿಜ್ಞಾನಿಗಳ ಅಭಿಪ್ರಾಯವಾಗಿದೆ.

ಜನಸಂಖ್ಯೆ

ವಿಶ್ವಸಂಖ್ಯೆ — 1972 ರ ಮಧ್ಯದಲ್ಲಿ ವಿಶ್ವದ ಜನಸಂಖ್ಯೆ 76 ಎಂಬ ಲಿಯ ಹೆಚ್ಚಿ, ದಾಖಲಾತಿ 3782 ಮಿಲಿಯ ಜನರಿದ್ದರು.

Quality Printing Neat Binding

Lakshminarasimha Press

Sivarampet, Mysore 1

ಮೈತುಂಬಿದ ಹಸು — ಕೊಡ ತುಂಬಿದ ಹಾಲು

ಡೆನ್ಮಾರ್ಕ್‌ನಿಂದ ಜರ್ಸಿ ತಳಿಯ ಮುವತ್ತು ಗರ್ಭಿಣಿ ಕಡಸುಗಳು ಮತ್ತು ಜರ್ಸಿ ತಳಿಯ ಎರಡು ಹೋರಿಗಳು ತಾ|| 20 ರಂದು ಬೆಂಗಳೂರು ನಗರಕ್ಕೆ ಬಂದವು. ಇವು ಧಾರವಾಡದ ಬಳಿ ಇರುವ ಭಾರತ–ಡೆನ್ಮಾರ್ಕ್ ಯೋಜನೆಯ ಉಪ ಕೇಂದ್ರಕ್ಕೆ ಡೆನ್ಮಾರ್ಕ್ ಸರಕಾರದ ಕೊಡುಗೆ.

ಧಾರವಾಡದ ಉಪಕೇಂದ್ರ ಬೆಂಗಳೂರು ಸಮೀಪದ ಹೆಸರುಘಟ್ಟದಲ್ಲಿರುವ ಭಾರತ–ಡೆನ್ಮಾರ್ಕ್ ಯೋಜನೆಯ ಮೂರು ಉಪಕೇಂದ್ರಗಳಲ್ಲಿ ಒಂದಾಗಿದ್ದು, ಉಳಿದ ಎರಡು ಕೇಂದ್ರಗಳು ಕೊಡಗು ಜಿಲ್ಲೆಯ ಸುಡಿಗೆ ಮತ್ತು ರಾಯಚೂರು ಜಿಲ್ಲೆಯ ಮುಸೇರಿಬಾದಿನಲ್ಲಿವೆ. ಐದನೇ ಯೋಜನೆಯಲ್ಲಿ ಇತ್ತೆ ನಾಲ್ಕು ಉಪ ಕೇಂದ್ರಗಳನ್ನು ಸ್ಥಾಪಿಸಲೂ ಉದ್ದೇಶಿಸಲಾಗಿದ್ದು 198 ಲಕ್ಷ ರೂಗಳ ವೆಚ್ಚ ಮಾಡಲಾಗುವುದು.

ಹಾಲು ಉತ್ಪಾದನೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಸ್ಥಳೀಯ ಕೃತಕ ಗರ್ಭದಾನದ ಮೂಲಕ ಸ್ಥಳೀಯ ತಳಿಯನ್ನು ಉತ್ತಮ ಪಡಿಸುವುದರಲ್ಲಿ ಭಾರತ–ಯೋಜನೆ ನಿರತವಾಗಿದೆ. ಎಲ್ಲಾ ಉಪಕೇಂದ್ರಗಳಲ್ಲಿ ಜರ್ಸಿ ತಳಿಯ ಹೋರಿಗಳಿದ್ದು ಸಮೀಪದ ಗರ್ಭಾದಾನ ಕೇಂದ್ರಗಳಿಗೆ ವೀರ್ಯವನ್ನು ಪೂರೈಸಲಾಗುತ್ತಿದೆ. ಹೆಸರಘಟ್ಟದ ಯೋಜನೆ 112 ಕೃತಕ ಗರ್ಭಾದಾನ ಕೇಂದ್ರಗಳಿಗೆ ವೀರ್ಯವನ್ನು ಒದಗಿಸುತ್ತಿದೆ

— ತರಬೇತಿ —

ರೈತರಿಗೆ ಅನುಕೂಲವಾಗುವಂತೆ ಹೆಸರುಘಟ್ಟದ ಫಾರಂನಲ್ಲಿ ಹಾಲು ಉತ್ಪಾದನೆ ಕುರಿತ ವಿಶೇಷ ತರಬೇತಿಯನ್ನು ವ್ಯವಸ್ಥೆ ಗೊಳಿಸಲಾಗುತ್ತಿದೆ. ಎ

ಮೇವು ಸಂಶೋಧನೆ, ಉತ್ತಮ ಮುಟ್ಟದ ಹೈನುಗಾರಿಕೆಗಳಿಗೆ ಸಂಬಂಧಿಸಿದಂತೆ ಸಂಶೋಧನೆಗೆ ಸಂಬಂಧಿಸಿದ ತನ್ನ ಚಟುವಟಿಕೆಗಳನ್ನು ಇತ್ತೀಚೆಗೆ ಭಾರತ–ಡೆನ್ಮಾರ್ಕ್ ಯೋಜನೆ ವಿಸ್ತರಿಸಿದೆ.

For Holdalls, Kit Bags, & Suit Cases

ಹೋಲ್ಡ್ ಆಲ್, ಕಿಟ್ ಬ್ಯಾಗ್, ಸೂಟ್‌ಕೇಸುಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್

Fair Price Shop in Actual Practice

Contribute Liberally

to the National Defence Fund

SHAKTI

SUDHA

A Superb Tonic

FRUGALITY

If frugality were established in the state, if our expenses were laid out rather in the necessaries than the superfluities of life, there might be fewer wants, and even fewer pleasures, but infinitely more happiness.

– Goldsmith

DALMIA CEMENT (BHARAT) LIMITED

Dalmiapuram (Tamil Nadu)

Head Office: 4 Scindia House, New Delhi - 110001

ಕ್ಷೇಮಕೆ ಕಾರಣ ಹರುಷಾಶ್ರು

ಜಯಜಯ ದೇವತೆ, ಜಯ ಗೋಮಾತೆ॥
ಭಾರತ ಮಾತೆಯ ಕುಲಸುತೆಯೆ
ವಂದನೆ ನಿನಗೆ ಕಾಮಿತ ದಾತೆ
ಸೇವಾಧರ್ಮ ಸ್ವರೂಪಿಣಿಯೆ ॥ 1 ॥

ನಿನ್ನಯ ಸೇವಾ ಭಾಗ್ಯವು ನಿಜಕೂ
ಪುಣ್ಯವಿಹೀನಗೆ ಸಿಗದೆಂದೂ
ನಿನ್ನಯ ಮಹತಿಯನರಿಯುವ ಬಯಕೆ
ನಾಸ್ತಿಕ ರಾಯಗೆ ಬರದೆಂದೂ ॥ 2 ॥

ಜಗದಂಗಳದಲಿ ಇಂದಿನ ನೀತಿ
ನಿನ್ನ ಸಂಹಾರದ ನಿತಿಹುದೆ !
ಎಂತಹ ದೌಷ್ಟ್ಯವು ಭಾರತಕೊದಗಿತು
ಸಜ್ಜನ ಹೃದಯವು ನುರುಗುತಿದೆ ॥ 3 ॥

ನಿನ್ನಯ ಸ್ನೇಹದ ಕಂಗಳಿಂದ
ನಿರತವು ಉರುಳುವ ಶೋತಾಶ್ರು
ದೇಶಕೆ ಬೆಂಕಿಯ ಹತ್ತಿಸದಿಹುದೆ ?
ಕ್ಷೇಮಕೆ ಕಾರಣ ಹರುಷಾಶ್ರು ॥ 4

— ವಜ್ರಳ್ಳಿ ಗಣಪತಿ ಶರ್ಮಾ

ಬಸವಣ್ಣ

ಬಸವಣ್ಣ ಬಾರಣ್ಣ
ಗೆಜ್ಜೆ ತಾಳಕೆ ಕುಣಿಯಣ್ಣ
ಈ ನಾಡಿನ ಮಹಿಮೆ ತುಂಬಿದೆಯಣ್ಣಾ
ಮೊದಲು ನನಗೆ ಗೊತ್ತಿಲ್ಲವಣ್ಣಾ ॥

ಗೋಮಾತೆ ನಿನ್ನ ತಾಯಣ್ಣ
ನೀ ಆ ಜಗಜ್ಜನನಿಯ ಮಗನಣ್ಣಾ
ಈ ಜಗತ್ತಿನ ಮಹಿಮೆಯ ತಿಳಿಸಣ್ಣಾ
ಕರುಣಾಕರನು ನೀನಣ್ಣಾ ಬಸವಣ್ಣಾ ॥

— ಗಣಪತಿ ಡಿ ಭಟ್
ಚಿನ್ಮಯಿ

ದಿವ್ಯವಾಣಿ

ರಾಜಕೀಯವನ್ನು ಒಂದು ವೃತ್ತಿಯಾಗಿ ಅವಲಂಬಿಸಿ ನೀನು ಸ್ವಾಮಾಣಿಕವಾಗಿರಲಾರೆ. — ಹೋವ್

ಇವಳು ನಾರಿಯೋ, ಮಾರಿಯೋ ?

ಲಂಡನ್— ವಿವಾಹವಿಚ್ಛೇದನಾ ಕೋರ್ಟಿನಲ್ಲಿ ಒಬ್ಬ ಲಾಯರು ತನ್ನ ಇಂಜಿನಿಯರ್ ಕಕ್ಷೀಗಾರನ ಮೇಲೆ ಅವನ ಪತ್ನಿ ಹಿಂಸಾತ್ಮಕ ಕೈಗೊಳ್ಳುತ್ತಿದ್ದಾಳೆಂದೂ ಪ್ರತಿ ದಿನ ಅವನು ಕೆಲಸದಿಂದ ವಾಪಸ್ಸು ಬಂದಾಗ ಹೊಡೆದು ಬಡಯುವದಾಗಿ ಬಿದರಿಸುತ್ತಿರುವಳೆಂದೂ, ಒಂದು ದಿನ ಅವನನ್ನು ಒಳಕ್ಕೆ ಬಿಡದೆ ಹೊರಗೆ ಸುರಿಯುವ ಮಳೆಯಲ್ಲೇ ನಿಲ್ಲಿಸಿದ್ದಳೆಂದೂ ನಂತರ ಒಳಕ್ಕೆ ಬಿಟ್ಟು ಜೋರಾಗಿ ಒದ್ದಳೆಂದೂ ಅವನು ಪ್ರಜ್ಞಾಶೂನನಾಗಿ ಬಿದ್ದನೆಂದೂ ಹೇಳಿದರು – 32 ವರ್ಷಗಳ ವಿವಾಹಾನಂತರ ಈ ದಂಪತಿಗಳು ಪ್ರತ್ಯೇಕವಾಗಿ ವಾಸಿಸುತ್ತಿರುವರು – ಪತಿ ಗಾರ್ಸ್ಟಬೀಗೆ, ಅವಳ ಮಿಗಿಡನ್ನು ಹಿಂಸಿಸಬಾರದು, ಹೊಡೆಯಬಾರದು ಎಂದು ಜಡ್ಜರು ಆಜ್ಞೆ ಮಾಡಿರುವರು

★

ಛತ್ರಪತಿ ಶಿವಾಜಿ

ನವದೆಹಲಿ — ಛತ್ರಪತಿ ಶಿವಾಜಿಯ ಕಿರೀಟಧಾರಣಾ ತ್ರಿ-ಶತಮಾನೋತ್ಸವ ಸಮಾರಂಭವನ್ನು ಉದ್ಘಾಟಿಸುತ್ತಾ, ಭಾರತ ಉಪಾಧ್ಯಕ್ಷ ಶ್ರೀ ಸರ್ವಪಲ್ಲಿ ರಾಧಾಕೃಷ್ಣನ್ ರವರು ಶಿವಾಜಿಯನ್ನು ಶ್ಲಾಘಿಸಿ, ಅವರು ರಾಷ್ಟ್ರ ನಾಯಕರೆಂದರು.

ಪಶುಸಂಪತ್ತನ್ನು ಅಭಿವೃದ್ಧಿ ಗೊಳಿಸಲು ರೈತರಿಗೆ ಮನವಿ

ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿ ಅಭಿವೃದ್ಧಿಗೆ ಆದ್ಯತೆಯನ್ನು ನೀಡಲಾಗಿದೆಯೆಂದು ವ್ಯವಸಾಯ ಮತ್ತು ಪಶುಸಂಗೋಪನ ಸಚಿವ ಶ್ರೀ ಎಸ್. ಚಿಕ್ಕೇಗೌಡರು ಇತ್ತೀಚೆಗೆ ಬಳ್ಳಾರಿಯಲ್ಲಿ ತಿಳಿಸಿದರು ; ಮಿಶ್ರತಳಿ ಹಸುಗಳನ್ನು ಅಭಿವೃದ್ಧಿ ಗೊಳಿಸುವ ಮೂಲಕ ಹಾಲಿನ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಅವರು ರೈತರಿಗೆ ಮನವಿಮಾಡಿಕೊಂಡರು

★

ದಿವ್ಯವಾಣಿ

ವಿಶ್ವದಲ್ಲಿ ವಿಜಯಗೊಳ್ಳಲು, ಒಬ್ಬನು ಮೂಢನಂತೆ ಕಾಣಿಸಿಕೊಂಡು, ವಿವೇಕಿಯಾಗಿರುವುದು ಅವಶ್ಯಕವೆಂಬುದನ್ನು ನಾನು ಸದಾ ನೋಡುತ್ತಿರುವೆನು.

— ವಾಲ್ಟೈರ್

ಜನಸಂಖ್ಯೆ

ವಿಶ್ವಸಂಸ್ಥೆ - 100 ವರ್ಷಗಳಲ್ಲಿ ವಿಶ್ವಜನಸಂಖ್ಯೆ ಬೆಳವಣಿಗೆ ನಿಂತು, ಸುಮಾರು 12 ಬಿಲಿಯನ್ ಸ್ಥಿರವಾಗಿರುವುದೆಂದು ನೂತನ ವಿಶ್ವಸಂಸ್ಥೆ ವರದಿ ತಿಳಿಸುತ್ತಿ

ಪ್ರಾಣಿಸಂಪತ್ತಿನ ರಕ್ಷಣೆ [ಪಾವೆಲ್ ಖರ್ಲ್‌ಮೋವ್]

ಹಣದ ಹುಚ್ಚು ಹಿಡಿದ, ಲಾಭದಾಶೆಯ ಬೇಟೆಗಾರರು ಪ್ರಾಣಿಗಳನ್ನು ಕೊ ಶ್ರಲೇ ಇದ್ದರು ; ಚೂರು ದಯೆಯೂ ಇಲ್ಲದೆ, ಎಣೆಯಿಲ್ಲದ ಆಕೆಬುರುಕಾತನದಿಂ ದ ಸೈಬೀರಿಯಾದಲ್ಲಿಯ ಕೃಷ್ಣಮೃಗಗಳನ್ನೂ, ಉತ್ತರ ಅಮೇರಿಕಾದಲ್ಲಿಯ ಮಹಿ ಷ ಗಳನ್ನೂ, ಏಷ್ಯಾದಲ್ಲಿಯ ಸೈಗಾ (ಬಯಲು ಜೀಮೆಯ ಜಿಂಕೆ) ಗಳನ್ನೂ, ಅಫ್ರಿ ಕಾದಲ್ಲಿಯ ಸಿಂಹಗಳನ್ನೂ, ಆಸ್ಟ್ರೇಲಿಯಾದಲ್ಲಿಯ ಕಾಂಗರೂಗಳನ್ನೂ ಬೇಟೆಯಾ ಡಲ್ಕೆ ಲೇ ಇದ್ದರು. ಎಕಪ್ರಕಾರವಾಗಿ ಗುಂಡಿನ ಮಳೆ ಸುರಿಸುವ ದೊಡ್ಡ ಬಂದೂ ಕ ಹಿಂಸಾಚಿ ಶಕ್ತಿಯಿಂದ ಅವರು ಮತ್ತ ಗೊಂಡಿದ್ದರೆ, ನಿಸರ್ಗವು ಅಗಾಧ, ಅಕ್ಷಯ ಎಂ ಸುಳ್ಳು, ಪುಥ್ಯೆಯಿಂದ ಅವರು ಮೂಢರೂ ಆಗಿದ್ದರು.

ಕೆಲವೊಂದು ಜಾತಿ ಸತ್ತು ಹೋಗುವುದು ಮತ್ತು ಕೆಲವೊಂದು ಹೊಸ ಜಾತಿಗ ಳು ಕಾಣಿಸಿಕೊಳ್ಳುವುದು ಉತ್ಕ್ರಾಂತಿಯ ಮೂಲ ನಿಯಮವೆಂಬುದು ನಿಜ; ಸಹ ಸ್ರ ಸಹಸ್ರಾರು ವರ್ಷಗಳು ಹಿಡಿಯುವ ಅತ್ಯಂತ ಸಿಧಾನತಮಗತಿಯು ಪ್ರಕೃತಿಯ ಇದು. ಆದರೆ ಮನುಷ್ಯನು ವನ್ಯಜೀವಿಗಳ ಪ್ರಪಂಚದ ಮೇಲೆ ಅತಿಕ್ರಮಣ ಮಾಡಿ ದಾಗ ಮಾತ್ರ ಅವು ಅತ್ಯಂತ ವಿನಾಶಕಾರಿ ಗತಿಯಲ್ಲೇ ಕಣ್ಮರೆಯಾಗತೊಡಗುತ್ತವೆ ಕಮೊಡೊಂ ನಡುಗಡ್ಡೆಗಳ ಅಗ್ರಗಾಮಿಗಳಿಗೆ, ಕರಾವಳಿ ಜಲದಲ್ಲಿ ಶಾಂತವಾಗಿ " ಪಕ್ಕಾಬೇಜ " ವನ್ನು ಮೇಯುತ್ತಾ ಕಾಲಕಳೆಯುತ್ತಿದ್ದ ನಿರುಪದ್ರವಿ ಪ್ಲೆಲಿಂಕ್ಸ್ " ಸಮುದ್ರ ಹಸು " ಗಳನ್ನು ನಿರ್ನಾಮ ಮಾಡಲು 30 ವರ್ಷಗಳು ಸಾಕಾದವು

ಮನುಷ್ಯನು ಸದಾ ಕಾಲವೂ ಪ್ರಾಣಿಗಳ ಜೀವನದಲ್ಲಿ ಸ್ಥೇರವಾಗಿಯೇ ಕ್ರ ಕ್ಷೇಪ ನಡೆಸಿರುತ್ತಾನೆ ; ಅಥವಾ ಇದ್ದಕ್ಕಿಂತ ಬುದ್ಧಿವಂತಿಕೆಯಾದ ಅವುಗಳನ್ನು ರಕ್ಷಿಸಿಡುತ್ತಾನೆ. " ಮನುಷ್ಯ ಒತ್ತಡವೂ ಅನಿರೋಕ್ಷವಾಗಿ ಪ್ರಾಣಿಗಳ ಮೇಲೆ ಭಾರವನ್ನು ಬೀಳಿಸಬಹುದು ಅಂದರೆ ಮಾನವನ ಆರ್ಥಿಕ ಚಟುವಟಿಕೆಗಳು ಅವು ಗಳ ಇಕ್ಕೆಯ ಸ್ಥಿತಿಗತಿಗಳನ್ನು ಸೂಡ ಇಲ್ಲದಂತೆ ವಕ್ಕಾಡುತ್ತವೆ. ಭೂಮಿಯ ಮೇಲೆ ಒಂದು ಹೊಸ ನಿಸರ್ಗ ದೃಶ್ಯವು ಕಾಣಿಸಿಕೊಳ್ಳುತ್ತವೆ ಇದು ಸ್ಪಷ್ಟ, ಸಹಜ, ತರ್ಕಬದ್ಧ ಮತ್ತು ಅನಿವಾರ್ಯವೆ ಆದರೆ ಪ್ರಾಣಿ ಜಗತ್ತು ರಕ್ಷಿಸಲ್ಪಡಬೇಕೆ ಎಂಬುದು ಮಾನವನ ಸಂಕಲ್ಪ ಶಕ್ತಿಯನ್ನೇ ಅವಲಂಬಿಸಿದೆ. ಅದರ ಮತಿಹೀನತೆ ಯಿಂದ ಅವುಗಳ ವಂಶಗಳನ್ನು ನಷ್ಟಪಡಿಸುವುದಕ್ಕಿಂತಲೂ ಅವುಗಳನ್ನು ರಕ್ಷಿಸುವ ಸಂತತಿಯನ್ನು ಪುನರುಜ್ಜೀವಿಸುವ ಮನುಷ್ಯ ಪ್ರಕೃತಿ ಸಹಜ ಪಾಲು ಕಠಿಣವೆಂಬು ದನ್ನು ನಾವು ಲಕ್ಷ್ಯದಲ್ಲಿಟ್ಟುಕೊಳ್ಳೋಣ

★

ಕಬೀರವಾಣಿ

ಸಾಧು ನ ಗಾಂಠನ ಬಾಂಧಈ, ಉದರಸಮಾತ್ ಲೇಯ್ ।
ಆಗೇ ಪೀಛೇ ಹರಿ ಖಡೇ, ಜಬ ಮಾಂಗೇ ತಬದೇಯ್ ॥

ಸಾಧು ತನ್ನ ಗಂಟಿನಲ್ಲಿ ಏನನ್ನೂ ಕಟ್ಟುವುದಿಲ್ಲ (ಯಾವ ವಸ್ತುವನ್ನೂ ನೊದಲೇ ಸಂಗ್ರಹಿಸಿ ಇಟ್ಟುಕೊಳ್ಳುವುದಿಲ್ಲ) ಅವನು ತನ್ನ ಉದರ ಪೋಷಣೆಗೆ ಅಗತ್ಯವಿರುವಷ್ಟನ್ನೇ ತೆಗೆದುಕೊಳ್ಳುತ್ತಾನೆ. ಅವನ ಹಿಂದೆಯೂ ಮುಂದೆಯೂ ಮುಂದೆಯೂ ದೇವರು ನಿಂತುಕೊಂಡಿರುವುದರಿಂದ. ಸಾಧುವು ಬೇಡಿದ ಕೂಡಲೆ ಅವನಿಗೆ ದೇವರು ಕೊಡುತ್ತಾನೆ

ಹಸುಗಳ ಆಗಮನ — ಹಾಲು ಉತ್ಪಾದನಾ ತರಬೇತಿ

ಬೆಂಗಳೂರು— ಡೆನ್ಮಾರ್ಕಿನಿಂದ ಜರ್ಸಿ ತಳಿಯ ಮುವತ್ತು ಗರ್ಭಿಣಿ ಕಡಸು ಗಳು ಮತ್ತು ಜರ್ಸಿ ತಳಿಯ ಎರಡು ಹೋರಿಗಳು ಆಗಮಿಸಿದವು ; ಇವು ಧಾರವಾಡ ದ ಬಳಿಯಿರುವ ಭಾರತ-ಡೆನ್ಮಾರ್ಕ್ ಯೋಜನೆಯ ಉಪಕೇಂದ್ರಕ್ಕೆ ಡೆನ್ಮಾರ್ಕ್ ಸರಕಾರದ ಕೊಡುಗೆ — ರೈತರಿಗೆ ಅನುಕೂಲವಾಗುವಂತೆ ಹೆಚ್ಚುಳಿಪ್ತದ ಫಾರಂ ನಲ್ಲಿ ಹಾಲು ಉತ್ಪಾದನೆ ಕುರಿತ ವಿಶೇಷ ತರಬೇತಿಯನ್ನು ವ್ಯವಸ್ಥೆಗೊಳಿಸಲಾಗುತ್ತಿದೆ

★

ಈ ಆನಂದ ಸಂವತ್ಸರದಲ್ಲಿ

ಯಾನುನು ಪಶುನಾಯಕನಾಗಿರುವುದರಿಂದ ಪಶುಗಳಿಗೆ ತೋರಿದರೆಯುಂಟಾಗುತ್ತದೆ ಎಂದು ಸಂಚಾರಂಗ ತಿಳಿಸುತ್ತದೆ

Help The Gorakshana

— HumanitarianPropoganda Monthly ....

ವುಡ್‌ಲಾಂಡ್ 22 3 74 ರಿಂದ

ಅವೋಘ 4 ನೇ ವಾರ

ಹಿಂದಿ ಕಲರ್ ಮಹೋನ್ನತ ಚಿತ್ರ

ಧರ್ಮ

ಪಾತ್ರ – ಪ್ರಾಣ್, ನವೀನ್ ನಿಶ್ಚಲ್, ರೇಖ

ದಿನ 3 ಪ್ರದರ್ಶನಗಳು

★

ಅಪೆರಾ 22 3 74 ರಿಂದ

ಜೀನಸ್

ಯೂನಿವರ್ಸಲ್ ಪಿಕ್ಚರ್ಸ್‌ರವರ ಈಸ್ಟ್‌ಮನ್ ಕಲರ್ ತಮಿಳು ಚಿತ್ರ

ಪಾತ್ರ — ಜೆಮಿನಿ ಗ್ಯಣೇಶ್ ಸುಂದರರಾಜ್ ನಿರ್ಮಲ ನಂಬಿಯಾರ್

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ



ಪೂರ್ಣ ನಿಶೇಧವಾಗಲಿ

Protect the Cow

Edited Printed and Published by Dharmapracharaniratа M S. Krishna Rao (Proprietor) at the Satvawadi Press, Chamaraja puram Mysore

(1)

ನಿಮಗೆ ಯುಗಾದಿ ಶುಭಾಶಯಗಳು

ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ರವರ ಯುಗಾದಿ ಸಂದೇಶ —

" ಶ್ರೀ ಆನಂದ ಸಂವತ್ಸರವು ನಾಡಿನಲ್ಲಿ ಉತ್ತಮ ಮಳೆ ಹಾಗೂ ಬೆಳೆಯನ್ನು ಕೊಟ್ಟು ಕರ್ನಾಟಕವನ್ನು ಸಮೃದ್ಧವಾಗಿಸಲಿ ಎಂದು ದೇವರನ್ನು ಪ್ರಾರ್ಥಿಸಿ, ಹೊಸ ವರುಷವು ಜನತೆಯ ಕಷ್ಟಕಾರ್ಪಣ್ಯಗಳನ್ನು ದೂರಮಾಡಿ ನಿತ್ಯ ಹರುಷವನ್ನುಂಟು ಮಾಡಲಿ ಎಂದು ಹಾರೈಸುತ್ತೇನೆ. ಈ ಶುಭದಿನದಂದು ನಾಡಬಾಂಧವರಿಗೆಲ್ಲ ನನ್ನ ಹಾರ್ದಿಕ ಶುಭಾಶಯಗಳು ".

★

ಕರ್ನಾಟಕ ಮತ್ತು ರೇಷ್ಮೆ

ಕರ್ನಾಟಕ ರಾಜ್ಯ, ರೇಷ್ಮೆ ಕ್ಷೇತ್ರವನ್ನು ಪ್ರಗತಿಪಥದಲ್ಲಿ ಕೊಂಡೊಯ್ಯಲು ಸಿದ್ಧವಾಗಿದೆ. ಉದ್ಯೋಗಾವಕಾಶ ಕಲ್ಪಿಸಿಕೊಡುವ ಈ ಕೈಗಾರಿಕೆ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ತನ್ನ ವರಮಾನವನ್ನು ಹೆಚ್ಚಿಸಿಕೊಳ್ಳುವುದಲ್ಲದೆ, ವಿದೇಶವಿನಿಮಯ ಗಳಿಸಿ ಕೊಳ್ಳುವಲ್ಲಿಯೂ ದೇಶಕ್ಕೆ ಸಹಾಯವಾಗುತ್ತದೆ.

ದೇಶದಲ್ಲಿನ ಉಪ್ಪುನೇರಳೆ ರೇಷ್ಮೆ ಒಟ್ಟು ಉತ್ಪನ್ನಕ್ಕೆ ಕರ್ನಾಟಕದ ಕೊಡುಗೆ ಶೇಖಡ 80 ರಷ್ಟಿದ್ದು, ಇಳ್ಳನ ರೇಷ್ಮೆ ಹಾಗೂ ರೇಷ್ಮೆ ಉಡುಪುಗಳು ಯಾವಾಗಲೂ ಪ್ರಸಿದ್ಧವಾದವು. ನಾಲ್ಕನೇ ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿ ರಾಜ್ಯದ ರೇಷ್ಮೆಯ ವಾರ್ಷಿಕ ಉತ್ಪನ್ನ 14 ಲಕ್ಷ ಕೆ. ಜಿ ಯಿಂದ 20 ಲಕ್ಷ ಕೆ. ಜಿ. ಗೆ ಏರಿತು. ರೇಷ್ಮೆ ಕ್ಷೇತ್ರದ ಈ ಸಾಧನೆಗೆ " ಬೈವೋಲ್ಟೈನ್ " ಮಿಶ್ರತಳಿ ರೇಷ್ಮೆ ಹುಳುಗಳ ಸಾಕಾಣಿಕೆಯೇ ಕಾರಣ. ಇವು ಉತ್ಪನ್ನವನ್ನು ದ್ವಿಗುಣಗೊಳಿಸುವ ಆಶಾದಾಯಕ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಮುಖ್ಯಾಧಿಕಾರಿಗಳು,
ವಾರ್ತಾ ಮತ್ತು ಪ್ರಚಾರ ಇಲಾಖೆ,
ಕರ್ನಾಟಕ ಸರ್ಕಾರ,
ಇವರಿಂದ ಪ್ರಕಟಿತ

ರೈಲಿನ 3 ನೇ ತರಗತಿ — ನವದೆಹಲಿ— ರೈಲಿನಲ್ಲಿಯ 3 ನೇ ತರಗತಿಯನ್ನು ಏಪ್ರಿಲ್ 1 ರಿಂದ ತೆಗೆದುಹಾಕಲಾಗುತ್ತೆ.

ವಿಷ್ಯವನ — ಪ್ರತಿ ಇನ್ನೂರು ಮಾನವರಲ್ಲಿ ಒಬ್ಬನು ವಿಷ್ಣುವನು ಆಗಿರುವನು.

ಶಂಕು ಸ್ಥಾಪನೆ

ಮೈಸೂರು— ರೂ. 21 ಕೋಟಿಯ ವಿಕ್ರಾಂತ್ ಟೈರ್ಸ್ ಶಂಕು ಸ್ಥಾಪನೆಯನ್ನು ನೆರವೇರಿಸುತ್ತಾ, ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು– ಅಡಳಿತಗಾರರೂ, ಕಾರ್ಮಿಕರೂ, ಉತ್ಪಾದನೆ ಹೆಚ್ಚಿಸಲು ಸೌಹಾರ್ದದಿಂದ ವರ್ತಿಸಬೇಕೆಂದು ಹೇಳಿದರು ; ತಿ ನರಸೀಪುರ – ಮೈಸೂರು ರಸ್ತೆಯಿಂದ ಹಿಡಿದು ಮೈಸೂರು–ಹುಣಸೂರು ರಸ್ತೆಯ ವರೆಗೆ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಲಾಗುವುದೆಂದು ಹೇಳಿದರು.

ಮುಸ್ಲಿಂ ವಿದ್ಯಾರ್ಥಿ ನಿಧಿ

ಬೆಂಗಳೂರು— ಬಡ ಮುಸ್ಲಿಂ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ನಿಧಿಯನ್ನು ಅಖಿಲ ಭಾರತ ಮುಸ್ಲಿಂ ಸಂಸ್ಥೆ ಸ್ಥಾಪಿಸಲು ಯೋಜಿಸಿದೆ.

ನ್ಯಾಯಬೆಲೆ ಅಂಗಡಿಗಳ ದುಸ್ಥಿತಿ

ಶಿವಮೊಗ್ಗಾ— ಸಕ್ಕರೆ ಹಂಚಿಕೆಯಲ್ಲಿ ದುಸ್ಕೃತ್ಯ ನಡೆಸಿದ ಆರು ನ್ಯಾಯಬೆಲೆ ಅಂಗಡಿಗಳ ಲೈಸೆನ್ಸನ್ನು ರದ್ದು ಪಡಿಸಲಾಗಿದೆ.

ಹೊಸ ಪಕ್ಷ

ನವದೆಹಲಿ— ವೀರ ಸವಾರ್ಕರ್ ಹಿಂದೂ ಸಭೆ ಎಂಬ ಹೊಸ ರಾಜಕೀಯ ಪಕ್ಷವು ಸ್ಥಾಪಿಸಲ್ಪಟ್ಟಿದೆ – ಭಾರತವನ್ನು ಆರ್ಯ ಜಾತ್ಯಾತೀತ ರಾಜ್ಯವಾಗಿ ಪರಿವರ್ತಿಸುವ, ಅಸಿರ್ಬಂದ ವ್ಯಾಪಾರ ವಾಣಿಜ್ಯ ಏರ್ಪಡಿಸುವ, ವ್ಯಾಪಾರ ವಾಣಿಜ್ಯದಲ್ಲಿ ಸರಕಾರದ ಸರ್ವಸ್ವಾಮಿತ್ವ ತೆಗೆದುಹಾಕುವ ಆಶಯಗಳನ್ನು ಹೊಂದಿದೆ.

ಪರೀಕ್ಷೆ ಬೇಡ

ಅಹಮದಾಬಾದು– " ಪರೀಕ್ಷೆ ಬೇಡ' ಚಳವಳಿಯಲ್ಲಿ ಅಹಮದಾಬಾದು ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಪೀಠೋಪಕರಣಗಳನ್ನು ಸುಟ್ಟುಹಾಕಿದರು.

★ ಕಲ್ಲಿಕೋಟೆ— ಓರ್ವ ಮಹಿಳಾ ಪೋಲೀಸಿನವಳ ಮಾನಭಂಗಕ್ಕೆ ಪ್ರಯತ್ನಿಸಿದ ವಬ್ಬರು ರಿಸರ್ವ್ ಪೋಲಿಸಿಗರನ್ನು ದಸ್ತಗಿರಿ ಮಾಡಲಾಗಿದೆ.

ಮೈಸೂರು ಸಿಲ್ಕ್

ಇದೀಗ ಕರ್ನಾಟಕ ಸರ್ಕಾರದ ರೇಷ್ಮೆ ನೇಯ್ಗೆ

ಕಾರ್ಖಾನೆಯಿಂದ ಕಣ್ಣು ತಣಿಸುವ ಆಕರ್ಷಕ ಬಣ್ಣಗಳು

ಮನೋಹರ ನಮೂನೆಯ ವಿಶಿಷ್ಟ ನಯಗಾರಿಕೆಯ

★

ಸೀರೆ ಮತ್ತು ವಸ್ತ್ರಗಳು ಹೊರಬಂದಿವೆ

ವಿಚಾರಣೆಗಳಿಗೆ :—

1 ಕರ್ನಾಟಕ ಗೌರ್ನಮೆಂಟ್ ಸೀಳ್ಕ್ ವೀವಿಂಗ್ ಫ್ಯಾಕ್ಟರಿ, ಮಾನಂದವಾಡಿ ರಸ್ತೆ, ಮೈಸೂರು

2 ಷೋ ಆಂಡ್ ಸೇಲ್ಸ್ ರೂಂ, ಕೆ. ಆರ್. ಸರ್ಕಲ್, ಮೈಸೂರು.

3 ಗುಪ್ತಾ ಮಾರ್ಕೆಟ್, ಕೆಂಪೇಗೌಡ ರೋಡ್, ಬೆಂಗಳೂರು – 9

4 ನಂ. 1/10, ಉಸ್ಮಾನ್ ರೋಡ್, ಟಿ. ನಗರ, ಮದ್ರಾಸ್ – 17.

ವುಡ್‌ಲಾಂಡ್ಸ್ 4 ನೇ ವಾರ ಧರ್ಮ

ಅಪೆರಾ 22 ರಿಂದ 74 ರಿಂದ ಜೀನ್ಸ್

ಟ್ಯಾಕ್ಸಿ ಮುಷ್ಕರ

ಕಲ್ಕತ್ತಾ — ಪೆಟ್ರೋಲು ಪದಾರ್ಥಗಳು ಮತ್ತು ಬಿಡಿ ಭಾಗಗಳ ಬೆಲೆ ವಿಪರೀತ ಏರಿದ್ದರೂ, ಸರಕಾರ ಸೂಕ್ತ ಪರಿಹಾರವನ್ನು ಒದಗಿಸುವುದರಲ್ಲಿ ವಿಫಲಗೊಂಡಿರುವದನ್ನು ಪ್ರತಿಭಟಿಸಿ ಕಲ್ಕತ್ತಾ ರಾಜಧಾನಿ ಜಿಲ್ಲೆಯ 8600 ಟ್ಯಾಕ್ಸಿಗಳು ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಿದವು.

ಪತ್ರಿಕಾ ಪ್ರತಿನಿಧಿಗಳಿಂದ ಬಹಿಷ್ಕಾರ

ನವದೆಹಲಿ— ಲೋಕಸಭೆಯ ಪ್ರೆಸ್ ಗ್ಯಾಲರಿಯಲ್ಲಿದ್ದ ಪಿಟಿಐ ಬಾತ್ಮೀದಾರ ಶ್ರೀ ಕೆ. ಸುಬ್ರಹ್ಮಣ್ಯರಿಗೆ ಬುಧವಾರ ಹೃದಯಘಾತವಾಗಿ ವೆಲ್ಲಿಂಗ್ಡನ್ ಆಸ್ಪತ್ರೆ ಸೇರಿಸಲ್ಪಟ್ಟಿ ಆಲ್ಲಿ ನಿಧನರಾದರು – ಅವರಿಗೆ ಸಮಯೋಚಿತ ಸೂಕ್ತ ಸಹಾಯವು ಪಾರ್ಲಿಮೆಂಟು ವೈದ್ಯಕೀಯ ದವರಿಂದ ದೊರಕಿಸದಿದ್ದುದನ್ನು ಪ್ರತಿಭಟಿಸಿ, ಪಾರ್ಲಿಮೆಂಟು ಎರಡು ಸಭೆಗಳಲ್ಲಿಯ ಎಲ್ಲಾ ಪತ್ರಿಕಾ ಪ್ರತಿನಿಧಿಗಳೂ ಕಾರ್ಯಕ್ರಮವನ್ನು ಬಹಿಷ್ಕರಿಸಿದರು.

ರೈಟರ್ಸ್ ಹೋಂ ಇಂಟರ್‌ನ್ಯಾಷನಲ್

ಬೆಂಗಳೂರು— ಅಖಿಲ ಕರ್ನಾಟಕ ಲೇಖಕರ ಮತ್ತು ಕಲಾವಿದರ ಸಂಘವು ಆವಲಹಳ್ಳಿಯಲ್ಲಿ ನಿರ್ಮಿಸಲಿರುವ ರೂ. 50 ಲಕ್ಷದ 'ರೈಟರ್ಸ್ ಹೋಂ ಇಂಟರ್‌ನ್ಯಾಷನಲ್' ನ ಶಂಕು ಸ್ಥಾಪನೆಯನ್ನು ಗೌರ್ನರ್ ಶುಖಾಡಿಯಾರವರು ನೆರವೇರಿಸಿದರು.

ತಿಂಡಿದರ ಇಳಿಸಲು

ಬೆಂಗಳೂರು– ಅಶೋಕಾ ಹೋಟಲಿಗೆ ಸಮಾಜವಾದಿ ಯುವಜನ ಸಭೆಯ 40 ಹುಡುಗಿಯರು, ಜಂಟಿ ಕಾರ್ಯದರ್ಶಿ ಶ್ರೀಮತಿ ಶೈಲಜಾರವರ ನೇತೃತ್ವದಲ್ಲಿ ಹೋಗಿ ಮುಷಾಲದೋಸೆ ತಿಂದು, ಕಾಫಿ ಕುಡಿದು ದೋಸೆಗೆ 50 ಪೈಸೆ ಕಾಫಿಗೆ 20 ಪೈಸೆ ಸರಿಯಾದ ಬೆಲೆ ಎಂದು ಕೊಟ್ಟರು – ಅಲ್ಲಿ ದೋಸೆಗೆ ರೂ 3 ಮತ್ತು ಕಾಫಿಗೆ ರೂ. 3 15 ಬೆಲೆ ಇದೆ – ಸಭೆಯವರು ಹೀಗೆ ಎಲ್ಲಾ ಕಡೆ ಬೆಲೆ ಏರಿಕೆ ವಿರುದ್ಧ ಚಳವಳಿ ಆಸುರಿಸುವವರಾಗಿರುವರು

ಕಸ್ಟಮ್ಸ್ ಅಧಿಕಾರಿಯ ಕೊಲೆ

ಭೌಜ್– ಶುಕ್ರವಾರ ಸಂಜೆ ಕಸ್ಟಮ್ಸ್ ಅಸಿಸ್ಟೆಂಟ್ ಕಲೆಕ್ಟರ್ ಶ್ರೀ ಡಿ. ಎಸ್. ಪಾಟೀಲರನ್ನು 6 ಮಂದಿ ಆಯುಧಪಾಣಿಗಳು ಹೊಡೆದು ಬಡಿದುದರಿಂದ ಮೃತಪಟ್ಟರು – ಈ ಕಾರ್ಯವು ಅಕ್ರಮ ಸಾಗಣಿಕೆದಾರರದೆಂದು ಪೊಲೀಸರು ಸಂಶಯಪಟ್ಟಿರುವರು

ಹಣ ದ್ವಿಗುಣ

ಕೋಲಾರ ಚಿನ್ನದ ಗಣಿ– ಹಣವನ್ನು ಎರಡರಷ್ಟು ಮಾಡುತ್ತೇನೆಂದು ಹೇಳುತ್ತಿದ್ದ ವೆಂಕಟಗಿರಿ ಕಂಡಕ್ಟರು ಮುನಿಯನ್ನು ಬಂಧಿಸಿ, ಅವರಲ್ಲಿದ್ದ ರೂ. 1200 ಮತ್ತು ಅಂಬಾಸಿಡರು ಕಾರನ್ನು ವಶಪಡಿಸಿಕೊಂಡರು.

ಹರಿಜನ ಕ್ರಿಶ್ಚಿಯನ್ನರು

ಬೆಂಗಳೂರು— ಹರಿಜನ ಕ್ರಿಶ್ಚಿಯನ್ನರಿಗೆ ಎಸ್ಸೆಸ್ಸೆಲ್ಸಿ ಪರೀಕ್ಷಾ ಶುಲ್ಕ ವಿನಾಯಿತಿ ಇದ್ದುದನ್ನು 74–75 ರಿಂದ ತಪ್ಪಿಸಲಾಗುವುದೆಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore